ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.659/2022

ಸಾಕ್ಷಿಯ ಹೆಸರುಃ ಪ್ರದೀಪ ಚಾಸಾಃ 2

ತಂದೆಯ ಹೆಸರುಃ ವಿಜೇಂದ್ರ ಪ್ರಾಸಾಃ 2

ವಯಸ್ಸುಃ 42 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಮೇಗರಮಕ್ಕಿ

ದಿನಾಂಕಃ25/07/2025 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ-

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. 3 ರಿಂದ 4 ಪೋಟೋಗಳಲ್ಲಿ ಸಾಕ್ಷಿ ತನ್ನನ್ನು ಗುರುತಿಸುತ್ತಾರೆ. ಅಡಿಕೆ ಕಾಯಿ ಅಮಾನತು ಮಹಜರನ್ನು ನಿಪಿ.6 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು 30/12/2021 ರಂದು ಸಹಿ ಮಾಡಿರುತ್ತೇನೆ. ಅಡಿಕೆ ಚೀಲ ಕಳುವಾದ ವಿಚಾರವಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

ದಿಃ23/12/2021 ರಂದು ಮೇಗರಮಕ್ಕಿಯ ಮೇಲ್ಪಾಲು ರಸ್ತೆಯಲ್ಲಿ ನಾನು ಹೋಗುತ್ತಿದ್ದಾಗ ಪೋಲಿಸರು ಚಾಸಾ 1 ರವರ ತೋಟದಲ್ಲಿ ಅಡಿಕೆ ಮರ ಕಡಿದಿದ್ದಾರೆ ಎಂಬ ವಿಚಾರ ತಿಳಿಸಿದಾಗ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ 3 ರವರೂ ಸಹಾ ಸಹಿ ಮಾಡಿರುತಾರೆ. ಚಾಸಾ 1 ರವರು ಸದರಿ ಜಾಗವನ್ನುತೋರಿಸಿರುತಾರೆ. ಸದರಿ ಸ್ಥಳದಲ್ಲಿ 47 ಮರಗಳನ್ನು ಕಡಿದು ಅಡಿಕೆ ಗೊನೆಗಳನ್ನು ಕಳುವು ಮಾಡಿರುತ್ತಾರೆ. ಸದರಿ ಮಹಜರನ್ನು

ಬೆಳಿಗ್ಗೆ 11 ರಿಂದ 12 ರವರೆಗೂ ನಡೆಸಿರುತ್ತಾರೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ನಂತರ ದಿಃ30/12/2021 ರಂದು ಕಳ್ಳತನವಾದ ಸ್ಥಳವನ್ನು ಶ್ರೀನಿವಾಸ ಅವರು ತೋರಿಸಿದ್ದು ನಂತರ ಸಾಕ್ಷಿಯು ಆರೋಪಿ 2 ಮತ್ತು 3 ರವರು ತೋರಿಸಿರುತ್ತಾರೆ ಎನ್ನುತ್ತಾರೆ. ಆ ಸಮಯದಲ್ಲಿ ಚಾಸಾ 6 ರವರು ಸಹಾ ಇದ್ದರು. ಸದರಿ ಮಹಜರನ್ನು 12-30 ರಿಂದ 1-00 ಗಂಟೆ ವರೆಗೂ ಜರುಗಿಸಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

<u>ಪಾಟೀ ಸವಾಲು **1** ನೇ ಆರೋಪಿ ಪರ ಶ್ರೀ ಬಿ ಕೆ ವಿ., ವಕೀಲರಿಂದಃ</u>

ಕೃತ್ಯ ನಡೆದ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ನನಗೆ ಯಾವುದೆ ನೋಟಿಸ್ ನೀಡಿರುವುದಿಲ್ಲ . ಕೃತ್ಯ ನಡೆದ ಸ್ಥಳಕ್ಕೂ ಹಾಗೂ ನಾನು ಇದ್ದ ಸ್ಥಳಕ್ಕೂ ಸುಮಾರು 4 ಕಿಮೀ ಅಂತರ ಇದ್ದು ನನ್ನನ್ನು ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ ಸದರಿ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಕೃತ್ಯ ನಡೆದ ಸ್ಥಳದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸ್ಥಳದ ಬಗ್ಗೆ ಪೋಲಿಸರು ವಿಚಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪೋಟೋವನ್ನು ಯಾವುದರ ಮೂಲಕ ಯಾರು ತೆಗೆದಿರುತತ್ತಾರೆ ಎಂದರೆ ಗೊತ್ತಿಲ್ಲ. ನಿಪಿ.2 ಮತ್ತು 6 ರ ಕಾಲಕ್ಕೆ ನನಗೆ ಯಾವುದೆ ಪೊಟೋ ತೋರಿಸಿರುವುದಿಲ್ಲ. ನಿಪಿ.3 ರಲ್ಲಿ ಬಿದ್ದಿರುವ ಮರ ಅಡಿಕೆ ಮರವಾಗಿರುವುದಿಲ್ಲ ಎಂದರೆ ಸರಿ. ನಿಫಿ2 ರಲ್ಲಿ ಅಡಿಕೆ ಮರಗಳನ್ನು ಯಾವ ಸಾಧನದಿಂದ ಕಡಿದಿರುತ್ತಾರೆ ಎಂದು ನಮೂದು ಮಾಡಲಾಗಿತ್ತು ಎಂದರೆ ನಮೂದು ಮಾಡಿರುವುದಿಲ್ಲ. 47 ಮರಗಳು ನಿಪಿ.3 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ನಿಪಿ.2 ಅನ್ನು ಯಾರು ಬರೆದಿರುತ್ತರೆ ಎಂದು ನನಗೆ ಗೊತ್ತಿಲ್ಲ. ನಿಪಿ2 ಅನ್ನು ಬರೆದವರು ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.2 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ನಿಪಿ.2 ಅನ್ನು ಮತ್ತು 6 ಅನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ಅನ್ನು ಬರೆದ 6-7 ದಿನಗಳ ನಂತರ ನಿಪಿ.6 ಅನ್ನು ಬರೆಯಲು ಠಾಣೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಿ ಪಿ.6 ರ ಕಾಲಕ್ಕೆ ಲಿಖಿತ ನೋಟಿಸ್ ನೀಡಿರುವುದಿಲ್ಲ. ಠಾಣೆಯಿಂದ ನಾನು ಮತ್ತು ಚಾಸಾ 6 ಬಿಟ್ಟು ಬೇರೆ ಯಾರೂ ಇರಲಿಲ್ಲ. ಯಾವುದೇ ಅಡಿಕೆ ಚೀಲಗಳೂ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಯಾವುದೇ ಅಡಿಕೆ ಈ ದಿನ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ನಿಪಿ. 6 ಕ್ಕೆ ಒಟ್ಟು ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.6 ರ ಚೆಕ್ಕುಬಂದಿ ಹಾಗೂ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಅಡಿಕೆಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಗೂ

ಹಾಗೂ ಮುದ್ದ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪೋಟೋ ತೆಗೆಯಲಿಲ್ಲ ಎಂದರೆ ಸರಿಯಲ್ಲ ನಿಪಿ.2 ಮತ್ತು 6 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದು ಸ್ವಳದಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **2** ಮತ್ತು **5** ನೇ ಆರೋಪಿಗಳ ಪರ ವಕೀಲರುಗಳು</u>

(1 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)

<u>ಪಾಟೀ ಸವಾಲು **3** ಮತ್ತು **4** ನೇ ಆರೋಪಿ ಪರ ಶ್ರೀ ಎಂ ಎನ್ ಎಸ್ **.,** ವಕೀಲರಿಂದಃ</u>

ಚಾಸಾ 6 ಹಾಗೂ ನನಗೆ ಯಾವುದೇ ಸಂಬಂಧ ಇಲ್ಲ. ಕೃತ್ಯ ನಡೆದ ಸ್ವಳದಿಂದ 2 ಕಿಮಿ ದೂರದಲ್ಲಿ ಮನೆಗಳು ಇರುತ್ತದೆ. ಕೃತದ ಸ್ವಳಕ್ಕೆ ಹೋಗುವಾಗ ಮನೆಗಳನ್ನು ದಾಟಿ ಹೋಗಬೇಕು ಎದರೆ ಸರಿ. ಕೃತ್ಯವು ಯಾವ ದಿನ ನಡೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಯಾವ ದಿನಾಂಕ ಕೃತ್ಯ ನಡೆಯಿತು ಎಂಬ ಬಗ್ಗೆ ಪೊಲೀಸರು ತಿಳಿಸಿರುವುದಿಲ್ಲ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ 8-10 ಜನ ಇದ್ದರು. ಚಾಸಾ 6 ಮತ್ತು ನಾನು ಒಟ್ಟಿಗೆ ಹೋದೆವು. ಪೋಲಿಸರು ವಾಹನವು ಮುಂದೆ ಹೋಗಿದ್ದು ನಾವು ಅವರ ಹಿಂದೆ ಹೋಗಿರುತ್ತೇವೆ. ನಾವು ಹೋಗುವ ಪೂರ್ವದಲ್ಲಿ ಅಡಿಕೆ ಮೂಟೆ ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ, ಪೋಲಿಸರು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ನಾಗೇಶ ಹಾಗೂ ಪೂರ್ಣೇಶ ಹೇಳಿದ್ದರಿಂದ ನನಗೆ ಗೊತ್ತಾಯಿತು. ಅ ಸಮಯದಲ್ಲಿ ಅಡಿಕೆ ಕೊಳೆತಿತ್ತು. ನಾನು ಸದರಿ ಚೀಲವನ್ನು ಬಿಚ್ಚಿ ನೋಡಿರುವುದಿಲ್ಲ, ಸದರಿ ಚೀಲ ಎತ್ತುವಾಗ ಹರಿದುಹೋಗಿ ಹಾಗೂ ಅಡಿಕೆ ಕೊಳೆತು ಹೋಗಿತ್ತು. ಕೊಳೆತು ಹೋದ ಬಗ್ಗೆ ಯಾವುದೆ ಪೋಟೋ ತೆಗೆದಿರುವುದಿಲ್ಲ. ಸದರಿ ವಿಚಾರವನ್ನುನಿಪಿ.6 ರಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ಚಾಸಾ 1 ನನಗೆ ಸಂಬಂಧಿಕರಾರಿಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗಳಿಗೂ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ದಿನಾಂಕಃ 25/07/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ